ಕರ್ನಾಟಕ ವಿಧಾನ ಸಭೆ

ಸೋಮವಾರ, 28ನೇ ಮಾರ್ಚ್ 1983ಚೈತ್ರ 1905

ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹನ್ನೊಂದು ಘಂಟೆಗೆ ಸೇಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ವೀರಣ್ಣ) ಪೀಠವನ್ನಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು

ರಾಜ್ಯದ ಜನತೆಯ ಆರ್ಥಿಕ ಪ್ರಗತಿ

164. ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಕೈಗಾರಿಕಾ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ:—

ಅ) ಕರ್ನಾಟಕ ರಾಜ್ಯದಲ್ಲಿ 1980-81, 1981-82ರ ತಲಾವಾರು ಆದಾಯವೆಷ್ಟು ;

ಆ) ರಾಜ್ಯದ ಮೇಲ್ಕಂಡ ಅಂಕಿಅಂಶಗಳಿಂದ ಜನತೆಯ ಆರ್ಥಿಕ ಪ್ರಗತಿ ಪರಿಣಾಮಕಾರಿಯಾಗಿ ಪ್ರಗತಿ ಹೊಂದುವ ಆಶಾಭಾವನೆ ಸರಕಾರಕ್ಕೆ ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಸಚಿವರು) ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರಿಸಿದರು.—

ಅ) 1980-81ರಲ್ಲಿ ಪ್ರಚಲಿತದಲ್ಲಿದ್ದ ತಲಾವಾರು ಆದಾಯ 1,314

1981-82ರಲ್ಲಿ ,, 1,458

ಆ) ತಲಾವಾರು ಆದಾಯದ ಮೇಲೆ ರಾಜ್ಯದ ಆರ್ಥಿಕ ಬೆಳವಣಿಗೆಯಾಗುತ್ತದೆಂದು ಹೇಳುವು ದಕ್ಕಾಗುವುದಿಲ್ಲ.

ಶ್ರೀ ಬೈರಪ್ಪಾಜಿ.—1980-81ರಲ್ಲಿ ತಲಾವಾರು ಆದಾಯ 1314 ರೂಪಾಯಿಗಳು ಮತ್ತು 1981-82ರಲ್ಲಿ 1458 ರೂಪಾಯಿಗಳು ಅಂದಾಗ 1981-82ರಲ್ಲಿ ಸ್ವಲ್ಪ ಮಟ್ಟಿಗೆ ಆದಾಯ ಸುಧಾರಿಸಿದೆ ಎಂದು ಹೇಳಿದ್ದಾರೆ. ಹಾಗೇ ಈ ಪ್ರಸಕ್ತ ಸಾಲಿನಲ್ಲಿ ತಲಾವಾರು ಆದಾಯ ಹೆಚ್ಚಾಗಿ ಆರ್ಥಿಕ ಸ್ಥಿತಿ ಉತ್ತಮವಾಗುವುದಕ್ಕೆ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ನಿರೂಪಿಸಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ —ತಲಾವಾರು ಆದಾಯ ಹೆಚ್ಚಾದ ಮಾತ್ರಕ್ಕೆ ರಾಜ್ಯದ ಸಾಮಾನ್ಯ ಜನತೆಯ ಆದಾಯ ಹೆಚ್ಚಾಗಿದೆ ಎಂದು ಅರ್ಥವಲ್ಲ. ಅನೇಕ ಸಲ ಹೆಚ್ಚು ಉದ್ದಿಮೆಗಳು ಬಂದಾಗ ಒಂದು ಉದ್ದಿಮೆಯ ಉತ್ಪಾದನೆಯ ಆಧಾರದ ಮೇಲೆ ಕೂಡ ತಲಾವಾರು ಆದಾಯವನ್ನು ನಿರ್ಣಯ ಮಾಡುತ್ತೇವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಆದಾಯ, ಮಳೆ ಚೆನ್ನಾಗಿ ಬಂದರೆ ಹೆಚ್ಚಾಗಿರುತ್ತದೆ, ಕಡಿಮೆಯಾದಾಗ ಕಡಿಮೆಯಾಗುತ್ತದೆ. ಈ ವರ್ಷ ಆರ್ಥಿಕ ಪ್ರಗತಿಗಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂಬುದನ್ನು ಈ ವರ್ಷದ ಇಕನಾಮಿಕ್ ಸರ್ವೆಯಲ್ಲಿ ಸಮೂಹಿಸಿ ಅದನ್ನು ಎಲ್ಲ ಸದಸ್ಯರಿಗೂ ಒದಗಿಸಿದ್ದೇವೆ. ಅದರಲ್ಲಿ ಬೇರೆ ಬೇರೆ ರಾಜ್ಯದ ತಲಾವಾರು ಆದಾಯದ ಅಂಕಿ ಅಂಶಗಳು ಕೂಡ ಇವೆ. ಅದನ್ನು ನೋಡಿದರೆ ಎಲ್ಲ ತಿಳಿಯುತ್ತದೆ. ಇದು ಸಾಮಾನ್ಯವಾದ ಪ್ರಶ್ನೆ. ಈ ವರ್ಷದ ಬಜೆಟ್ಟಿನಲ್ಲಿರತಕ್ಕ ಎಲ್ಲ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೆ ಆದಾಯ ಹೆಚ್ಚಾಗುತ್ತದೆ.

ಶ್ರೀ ಬೈರಪ್ಪಾಜಿ — ಮಳೆ ಬೀಳದೆ ಕ್ಷಾಮ ಬಂದಾಗ ಆದಾಯ ಕಡಿಮೆಯಾಗುತ್ತದೆ ಮತ್ತು ಮಳೆ ಬಂದಾಗ ಜಾಸ್ತಿಯಾಗುತ್ತದೆಂದು ಮಂತ್ರಿಗಳು ಹೇಳಿದರು. ಕೇವಲ ಮಳೆಯನ್ನೇ ಅವಲಂಬಿಸಿಕೊಂಡಿರತಕ್ಕ ಈ ರಾಜ್ಯದ ಜನತೆಯ ಸ್ಥಿತಿ ಪ್ರತಿ ವರ್ಷ ಒಂದಲ್ಲ ಒಂದು ರೀತಿಯಲ್ಲಿ ಏರುಪೇರಾಗುತ್ತಿದೆ. ಇದನ್ನು ನಾನು ಪ್ರಶ್ನೆ ಮಾಡುತ್ತೇನೆ. ತಲಾವಾರು ಆದಾಯ ಒಂದೇ ರೀತಿ ಇದ್ದು ಮುಂದುವರಿಯುವುದಕ್ಕೆ ವ್ಯವಸಾಯ ಗಾರರಿಗೆ ತಾವು ಏನು ಅನುಕೂಲ ಕಲ್ಪಿಸಿಕೊಟ್ಟು, ಅವರ ಸ್ಥಿತಿ ಕಡಿಮೆಯಾಗದಂತೆ, ಅವರ ಆದಾಯ ಕಡಿಮೆಯಾಗದಂತೆ ವ್ಯವಸ್ಥೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದು ಮತ್ತು ಬೇಸಾಯ ಪದ್ಧತಿಯನ್ನು ಸುಧಾರಣೆ ಮಾಡಲು ಹಾಕಿಕೊಂಡಿರತಕ್ಕ ಅನೇಕ ಕಾರ್ಯಕ್ರಮಗಳು ಜಾರಿಗೆ ಬಂದರೆ ತಾವು ಹೇಳಿದಂತೆ ಗ್ರಾಮಾಂತರ ಪ್ರದೇಶದ ಜನರ ಆದಾಯ ಹೆಚ್ಚಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಎಕನಾಮಿಕ್ ಸರ್ವೆ ವಿಷಯ ಹೇಳಿದರು, ಅದರಲ್ಲಿ ಹೇಳಿರುವುದು "The per capita income at current prices is expected to decrease from Rs, 1458 in 1981-82 to Rs.1436 in 1982-83." ಎಂದು ಇದೆ. ಅಂದರೆ the actual present position is not good. ಆ ಪೊಸಿಷನ್ ಅನ್ನು ಇಂಪ್ರೂವ್ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಈಗಾಗಲೇ ಆಯವ್ಯಯ ಪಟ್ಟಿಯಲ್ಲಿ ಕೊಟ್ಟಂತಹ ಎಲ್ಲ ಕಾರ್ಯಕ್ರಮಗಳನ್ನು ಜಾರಿಗೆ ಕೊಟ್ಟಾಗ ಆದಾಯ ಹೆಚ್ಚಾಗೇ ಆಗುತ್ತದೆ.

ಸರ್ಕಾರದ ಉತ್ಪನ್ನದಲ್ಲಿ ವೇತನ ಹಾಗೂ ವಿಶ್ರಾಂತಿ ವೇತನಕ್ಕಾಗಿ ಆಗುವ ಶೇಕಡಾವಾರು ವಿರ್ಚು

165. ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು).— ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರಿಸುವರೇ :—

ಅ) ಸರಕಾರಿ ನೌಕರರಿಗೆ 80-81, 81-82ರಲ್ಲಿ ಕೊಡಲಾದ ಸಂಬಳ, ವಿವಿಧ ತರದ ಭತ್ಯ, ಪೆನ್ಷನ್ ಇತ್ಯಾದಿಗಳಿಗೆ ವಿರ್ಚು ಮಾಡಿದ ಹಣದ ಮೊತ್ತವೆಷ್ಟು ;

ವೇತನ ಹಾಗೂ ಇತರೆ ಭತ್ಯಗಳು ವಿಶ್ರಾಂತಿ ವೇತನ/ಉಪದಾನ

ಆ) ಸರಕಾರದ ಉತ್ಪನ್ನದಲ್ಲಿ (ಬಜೆಟ್‌ದಲ್ಲಿ) ಶೇಕಡಾ ಎಷ್ಟರಷ್ಟು ಹಣ ಈ ಬಗ್ಗೆ ವಿರ್ಚಾಗಿರುತ್ತದೆ ;

ಇ) ಸರಕಾರ ನೌಕರರಿಗೆ ಹಾಗೂ ಸರಕಾರಿ ಪಿಂಚಣಿದಾರರಿಗೆ ಯಾವ ಯಾವ ತರಹ ಆಲೋಯನ್ಸ್ ಇತ್ಯಾದಿ ಬಾಬುಗಳ ಮುಖಾಂತರ ಹಣ ಕೊಡಲಾಗುತ್ತಿದೆ ;

ಈ) ಕೆಲವು ಖಾತೆಗಳಲ್ಲಿ ನೌಕರರಿಗೆ(ತಾತ್ಕಾಲಿಕ ಹಾಗೂ ಇತರ) ಪಗಾರ ಭತ್ಯೆ ಕೊಡುತ್ತಿದ್ದರೆ ಅಂತಹ ಹಣವನ್ನು ಕೆಲಸಗಳ ಹೆಸರಿನಲ್ಲಿ ವಿರ್ಚು ಹಾಕುತ್ತಿದ್ದರೆ, ವಿರ್ಚಾಗುತ್ತಿರುವ ಹಣದ ಮೊತ್ತವೆಷ್ಟು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು),—

ಅ)	1980—81 (ವಾಸ್ತವಿಕ)	1981—82 (ಪರಿಷ್ಕೃತ ಅಂದಾಜು)
	(ಕೋಟಿ ರೂಪಾಯಿಗಳಲ್ಲಿ)	
ಅ)	263.00	305.26
	42.07	48.98
ಅ)	1980—81	1981—82
	32%	30.9%

ಇ) ಸರಕಾರಿ ನೌಕರರಿಗೆ :

1) ತುಟ್ಟಿ ಭತ್ಯ

2) ಮನೆ ಬಾಡಿಗೆ ಭತ್ಯ ಮತ್ತು ನಗರ ಪರಿಹಾರ ಭತ್ಯ(ಕೆಲವು ನಗರ ಮತ್ತು ಪಟ್ಟಣದಲ್ಲಿ ಕೆಲಸ ಮಾಡುತ್ತಿರುವವರಿಗೆ)

3) ಯೋಜನಾ ಭತ್ಯ (ನೀರಾವರಿ ಮತ್ತು ಜಲವಿದ್ಯುತ್ ಯೋಜನೆಗಳ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವವರಿಗೆ)

4) ಗಿರಿ ಭತ್ಯ (ಗಿರಿ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವವರಿಗೆ)

5) ಹೊರ ರಾಜ್ಯ ಭತ್ಯ (ಹೊರ ರಾಜ್ಯದಲ್ಲಿರುವ ಈ ರಾಜ್ಯದ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ)

6) ಪಡಿತರ ಮತ್ತು ಸಮವಸ್ತ್ರ ಭತ್ಯ (ಆರೋಗ್ಯ ಇಲಾಖೆಯಲ್ಲಿರುವ ಶುಶ್ರೂಷಾ ಸಿಬ್ಬಂದಿಗೆ)

7) ಅಪಾಯ ಸಂಭವ ಭತ್ಯ (ಆರೋಗ್ಯ ಇಲಾಖೆಯಲ್ಲಿ ರೇಡಿಯಂ ಮತ್ತು ಕ್ಷ ಕಿರಣಗಳನ್ನು ನಿರ್ವಹಣೆ ಮಾಡುತ್ತಿರುವ ಸಿಬ್ಬಂದಿಗೆ)

8) ವೈದ್ಯಕೀಯ ಮತ್ತು ದೋಭಿ ಭತ್ಯ (ಮೊದಲ 2 ವೇತನ ಶ್ರೇಣಿಗಳಲ್ಲಿ ಇರುವ ಸರ್ಕಾರಿ ನೌಕರರಿಗೆ ಮತ್ತು ವಾಹನ ಚಾಲಕರಿಗೆ)

ಅ) ಸರಕಾರಿ ಪಿಂಚಣಿದಾರರಿಗೆ :

ವಿಶ್ರಾಂತಿ ವೇತನವು ಉಪದಾನ ಮತ್ತು ವಿಶ್ರಾಂತಿ ವೇತನದ ಮೇಲೆ ಕೊಡುವ ತುಟ್ಟಿಭತ್ಯಗಳನ್ನು ಒಳಗೊಂಡಿರುತ್ತದೆ.

ಈ) ಭತ್ಯಗಳಿಗೆ ವೆಚ್ಚ

1980-81 49.34 ಕೋಟಿ ರೂಪಾಯಿಗಳು (ವಾಸ್ತವಿಕ)
1981-82 78.16 ಕೋಟಿ ರೂಪಾಯಿಗಳು (ಪರಿಷ್ಕೃತ ಅಂದಾಜು)
1982-83 127.94 ಕೋಟಿ ರೂಪಾಯಿಗಳು (ಬಜೆಟ್ ಅಂದಾಜು)

1) 1980-81 7.94 ಕೋಟಿ ರೂಪಾಯಿಗಳು ವಾಸ್ತವಿಕ)
2) 1981-82 9.83 ಕೋಟಿ ರೂಪಾಯಿಗಳು (ಪರಿಷ್ಕೃತ ಅಂದಾಜು)
3) 1982-83 11.15 ಕೋಟಿ ರೂಪಾಯಿಗಳು (ಬಜೆಟ್ ಅಂದಾಜು)

ಶ್ರೀ ಬಿ. ಜಿ. ಬಣಕಾರ್.—ಸರ್ಕಾರದ ಉತ್ಪನ್ನದಲ್ಲಿ ಎಷ್ಟು ಹಣ ವಿರ್ಚಾಗಿದೆ ಎಂದು ಕೇಳಿದ್ದೇನೆ. ಸರ್ಕಾರದ ಉತ್ಪನ್ನ ಅಂದರೆ, ಕೇಂದ್ರ ಸರ್ಕಾರದಿಂದ ಬರತಕ್ಕ ಗ್ರಾಂಟನ್ನು ಬಿಟ್ಟು ರಾಜ್ಯ ಸರ್ಕಾರದ ತೆರಿಗೆ

ಯಿಂದ ಬರತಕ್ಕ ಎಷ್ಟು ಹಣ ಈ ಬಾಬಿಗಾಗಿ ಖರ್ಚಾಗಿದೆ ಮತ್ತು ರಾಜ್ಯ ಸರ್ಕಾರದ ತೆರಿಗೆ ಆದಾಯ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯದ ತೆರಿಗೆ ಆದಾಯ 1980-81ರಲ್ಲಿ 67,29,03,008 ರೂಪಾಯಿಗಳು; 1981-82ರಲ್ಲಿ 81,71,66,000 ರೂಪಾಯಿಗಳು. ಈ ಎರಡು ವರ್ಷದ ಆದಾಯದ ಆಧಾರದ ಮೇಲೆ ಈ ಪರ್ಸೆಂಟೇಜನ್ನು ತಿಳಿಸುತ್ತಿದ್ದೇವೆ.

ಶ್ರೀ ಬಿ. ಜಿ. ಬಣಕಾರ್.—ರಾಜ್ಯದ ಉತ್ಪನ್ನ ಎಷ್ಟು ಮತ್ತು ಖರ್ಚು ಎಷ್ಟು ಮಾಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯದ ತೆರಿಗೆ ಆದಾಯ ನಾನು ಹೇಳಿದ್ದು.

ಶ್ರೀ ಬಿ. ಜಿ. ಬಣಕಾರ್.—ಕೇಂದ್ರ ಸರ್ಕಾರದಿಂದ ಬಂದಂತಹ ಗ್ರಾಂಟಿನ ವಿವರ ಬೇಕಾಗಿಲ್ಲ. ನಮ್ಮ ರಾಜ್ಯದ ತೆರಿಗೆಯ ಉತ್ಪನ್ನ ಎಷ್ಟು ? ಅದು 305 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇದೆಯೇ ಅಥವಾ ಕಡಿಮೆ ಇದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಉತ್ಪನ್ನ ಹೆಚ್ಚು ಇದೆ. ನಾನು ಹೇಳಿದ್ದು ರಾಜ್ಯದ ತೆರಿಗೆ ಆದಾಯ ಮಾತ್ರವೇ ಹೊರತು ಕೇಂದ್ರದಿಂದ ಬಂದಂತಹ ಸಹಾಯಧನ ಅಲ್ಲ.

ಶ್ರೀ ಬಿ. ಜಿ. ಬಣಕಾರ್.—ಸರಿಯಾಗಿ ಉತ್ತರಿಸಿಲ್ಲ. ತಮ್ಮ ಉತ್ತರದಲ್ಲಿ ಉತ್ಪನ್ನದ ಶೇಕಡ 30.9ರಷ್ಟು ಹಣ ಖರ್ಚಾಗಿದೆ ಎಂದು ಹೇಳಿದ್ದೀರಿ. ರಾಜ್ಯದ ತೆರಿಗೆಯನ್ನು ಲೆಕ್ಕ ಹಾಕಿದರೆ ಶೇಕಡ 50 ಕ್ಕಿಂತ ಹೆಚ್ಚಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ರಾಜ್ಯ ಸರ್ಕಾರ ಮೆಸೂಲ್ಮಾಡತಕ್ಕ ತೆರಿಗೆಯ ಶೇಕಡ 30 ರಷ್ಟು ಎಂದು.

ಶ್ರೀ ಭೀಮಣ್ಣ ಖಂಡ್ರೆ.—ಪೆನ್‌ಷನ್ ಮತ್ತು ಸ್ಯಾಲರಿ ಸೇರಿ 360 ಕೋಟಿ ರೂಪಾಯಿಗಳಾಗುತ್ತದೆಂದು ಹೇಳಿದ್ದೀರಿ; ಇದು ಶೇಕಡ 30ರಷ್ಟಾಯಿತು. ರಾಜ್ಯದ ಉತ್ಪನ್ನದ 3 ರಷ್ಟು ಅಂದರೆ 1200 ಕೋಟಿ ರೂಪಾಯಿ ಆಗುತ್ತದೆ. ಅಷ್ಟು ಆದಾಯ ನಮ್ಮಲ್ಲಿ ಇಲ್ಲವಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೆ.

ಶ್ರೀ ಬಿ. ಜಿ. ಬಣಕಾರ್.—ಹಾಗಾದರೆ ರಾಜ್ಯದ ಒಟ್ಟು ಆದಾಯ ಎಷ್ಟು ? ಕೇಂದ್ರ ಸರ್ಕಾರದ ಸಹಾಯಧನ ಬಿಟ್ಟು ರಾಜ್ಯ ಸರ್ಕಾರದ ವರಮಾನ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ರಾಜ್ಯದ ಆದಾಯವನ್ನೇ ನಾನು ಹೇಳುತ್ತಿರುವುದು. ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯ ಎರಡೂ ಕೂಡಿ ನಾನು ಅಂಕಿಸಂಖ್ಯೆ ಕೊಟ್ಟಿದ್ದೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ—. ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಪ್ರಕಾರ ಎಷ್ಟು ಪರ್ಸೆಂಟ್ ಇರಬೇಕು ?

Sri S. R. Bommai—. 30 Percent of the tax revenue ಎಂದಿದೆ.

ಶ್ರೀ ಭೀಮಣ್ಣ ಖಂಡ್ರೆ.— ನಮ್ಮ ರಾಜ್ಯದ ಆದಾಯ ಒಂದು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚಿದೆಯೆ ? ಸರಿಯಾಗಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— 114 ಕೋಟಿ 73 ಲಕ್ಷ 6 ಸಾವಿರದ 50 ರೂಪಾಯಿಗಳು.

ಉಪಾಧ್ಯಕ್ಷರು.— ನಾಗರಾಜ್‌ರವರೇ, 166ನೇ ಪ್ರಶ್ನೆಯನ್ನು ಕೇಳಿ.

ಶ್ರೀ ಸಿ. ಬೈರೇಗೌಡ.— ನಾವು ಏತಕ್ಕೆ ಇಲ್ಲಿ ಬಂದಿದ್ದೇವೆ ಎಂಬುದು ಅರ್ಥವಾಗಬೇಕಾಗುತ್ತದೆ.

ಉಪಾಧ್ಯಕ್ಷರು— ಪ್ರಶ್ನೆ ಕೇಳಿದ್ದು ಬಣಕಾರ್ ಅವರು. ಅವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ.— ನಿಯಮಾವಳಿಯಲ್ಲಿ ಬೇರೆಯವರಿಗೂ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇದೆ.

ಉಪಾಧ್ಯಕ್ಷರು.—ತಾವು ಪ್ರಶ್ನೆ ಕಳುಹಿಸಿದ್ದರೆ ತಮಗೇ ಕೇಳುವುದಕ್ಕೆ ಅವಕಾಶ ಕೊಡುತ್ತಿದ್ದೆ. ಈಗಾಗಲೇ ನಾಲ್ಕು ಸಪ್ಲಿಮೆಂಟರಿ ಪ್ರಶ್ನೆಗಳಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ.— ನಾನು ಮೂರು ಸಾರಿ ಎದ್ದು ನಿಂತಿದ್ದೇನೆ. ಒಂದು ಸಾರಿಯೂ ನನಗೆ ಅವಕಾಶ ಕೊಡಲಿಲ್ಲ. ಏತಕ್ಕೆ ?

ಉಪಾಧ್ಯಕ್ಷರು.— ಅವಕಾಶ ಕೊಟ್ಟಿದ್ದೇನೆ, ಪ್ರಶ್ನೆ ಕೇಳಿ.

ಶ್ರೀ ಸಿ. ಬೈರೇಗೌಡ.— ಸರ್ಕಾರಿ ನೌಕರರು ರಾಜ್ಯದ ಜನಸಂಖ್ಯೆಯಲ್ಲಿ ಎಷ್ಟು ಪರ್ಸೆಂಟ್ ಇದ್ದಾರೆ?

ಶ್ರೀ ಎಸ್. ಆರ್. ಬೊಮ್ಮಾಯಿ.— ಆ ವಿವರ ನನ್ನ ಕಡೆ ಇಲ್ಲ.

ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ 20 ಅಂಶಗಳ ಕಾರ್ಯಕ್ರಮ

166. ಶ್ರೀ ಎ. ನಾಗರಾಜು (ಮಾಲೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಮುಖ್ಯಮಂತ್ರಿಗಳು ಉತ್ತರಿಸುವರೇ :

ಅ) 20 ಅಂಶಗಳ ಕಾರ್ಯಕ್ರಮದ ಸಮಿತಿಯು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹೊಸದಾಗಿ ನೇಮಿಸಲಾಗುತ್ತಿದೆಯೇ ;